ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-6 Issue 2, September-October, 2024, Pp. 45-51**
**©*IIMRD*, Mysuru**

IIMRD JOURNALS
**www.iimrd.com**

# ಜಾತಿ ವ್ಯವಸ್ಥೆಯ ಕುರಿತು ಕನಕದಾಸರ ಪ್ರತಿರೋಧದ ನೆಲೆಗಳು: ಒಂದು ವಿಶ್ಲೇಷಣೆ

**ಲೋಕೇಶ ಟಿ**
ಸಂಶೋಧಕರು, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಸಾರಾಂಶ: (Abstract)**

*ಕನ್ನಡ ನಾಡಿನ ಜನಕಲ್ಯಾಣ ಸಮಾಜದ ರೂಪಕಕಾರ, ಸರಳ ದಾಸಶ್ರೇಷ್ಠ ತಳಸಮುದಾಯದ ಪ್ರತೀಕವೆಂದು ಗುರುತಿಸಲ್ಪಡುವ ಕನಕದಾಸರು, ಎಲ್ಲವನ್ನೂ ಮೀರಿನಿಂತ ಜಾಯಮಾನ ಅವರದು. ಅಂದಿನ ಸಮಕಾಲೀನ ಸಮಾಜದಲ್ಲಿ ನಗಣ್ಯ ಸಮುದಾಯಗಳು ವೈದಿಕ ಆಚರಣೆಯನ್ನು ಪ್ರತಿರೋಧಿಸಿ ಮೀರಿ ಬೆಳೆಯುವುದು ಸುಲಭ ಸಾಧ್ಯವಾದುದಾಗಿರಲಿಲ್ಲ, ಆದರೆ ಅದನ್ನ ತಮ್ಮ ಕೀರ್ತನೆಗಳಲ್ಲಿ ನಿರೂಪಿಸುತ್ತ ಕನಕದಾಸರು ಅಂದಿನ ಸಾಧು ಸಂತ ಪಂಡಿತರೆನಿಸಿ, ಭಕ್ತರಿಗೆ ಕಾಣದ ದೇವರನ್ನು ಸಾಕ್ಷಾತ್ಕಾರ ಮಾಡಿ ತೋರಿಸಿದವರು ಕನಕರು. ವಿಜಯನಗರ ಕಾಲದ ಸಮಾಜವನ್ನು ಹತ್ತಿರದಿಂದ ನೋಡಿದ ದಾಸಮಹಿಮ ಮತ್ತೊಬ್ಬರಿಲ್ಲ. ಕನಕದಾಸರನ್ನ ಮಧ್ವ ಸಂಪ್ರದಾಯದಲ್ಲಿ ನೋಡುವುದೇ ಹೆಚ್ಚು ಆದರೆ ಅದೇ ದಾಸಕೂಟ ಪ್ರಾರ್ಥನೆಯ ಶ್ಲೋಕಗಳಲ್ಲಿ ಕನಕರ ಮಹಾತ್ಮೆ ಯಾವುವು ಕಾಣದೇ ಇರುವುದಕ್ಕೆ ಕಾರಣ ಶೂದ್ರ ಜಾತಿಯವನೆಂಬ ಮನಸ್ಥಿತಿ. ಆದರೂ ಇವರ ಸಮಾಜದ ಚಿಕಿತ್ಸಕ ವಿಶ್ವಾಸವು ಡಾಂಭಿಕ ಜನರ ಕಂದಾಚಾರದ ಅಂಧಕಾರವನ್ನು ಜರಿಯದೇ ಬಿಡಲಿಲ್ಲ. ಹೆಚ್ಚಾಗಿ ಆ ಸಂದರ್ಭದ ಸಮಾಜದಲ್ಲಿ ಹಲವು ಆಯಾಮಗಳಿಗೆ ಮುಖಾಮುಖಿಯಾಗಿ ಎದುರುಗೊಂಡ ಇವರ ಬದುಕು, ಇಂದಿಗೂ ಕಲ್ಯಾಣ ಸಮಾಜದ ಪರಿಭಾಷೆಯನ್ನ ಜಾರಿಗೊಳಿಸುವ ಜರೂರತ್ತುಗಳು ಇದೆ ಎಂದೇ ಹೇಳಬಹುದು. ಅಂದಿನ ಕಲುಷಿತ ಜಾತಿ ಮನಸ್ಸುಗಳ ಒಣಪ್ರತಿಷ್ಠೆಗೆ ನಿರ್ಲಕ್ಷಿತ ಜನ ಸಮುದಾಯಗಳು ಬಲಿಯಾದ ವಿವಿಧ ಬಗೆಗಿನ ಸಂಗತಿಗಳ ಚಿತ್ರಣ ವಿಜಯನಗರ ಸಾಮ್ರಾಜ್ಯದಲ್ಲಿ ಕನಕರು ಕಂಡುಂಡ ಸಂಗತಿಗಳ ಅವಶೇಷಗಳು ಈ ಲೇಖನದಲ್ಲಿ ಮೂಡಿಬಂದ ರೂಪಕಗಳೇ ಆಗಿವೆ.*

**ಮುಖ್ಯಪದಗಳು (Keywords):** ದಾಸ ಸಾಹಿತ್ಯ, ಕನಕ ದಾಸರು, ಕೀರ್ತನೆಗಳು, ಜಾತಿ ವ್ಯವಸ್ಥೆ, ಪ್ರತಿರೋಧದ ನೆಲೆಗಳು.

## ಪೀಠಿಕೆ

ಚರಿತ್ರೆ ಕಥನಗಳಲ್ಲಿ ವ್ಯಕ್ತಿನಿರೂಪಣೆ ಚರ್ಚೆ ಬಂದಾಗ ಮೊದಲು ಅವನ ಹುಟ್ಟು, ಕುಲ, ಮತ, ಪಂಥ ಹೀಗೆ ಒಂದೊಂದಾಗಿ ತೆರೆದುಕೊಳ್ಳುತ್ತವೆ ವ್ಯಕ್ತಿಯನ್ನು ಜಾತಿ ಕೇಂದ್ರೀಕರಿಸಿ ಭಾಷಾವಾರು, ಧರ್ಮವಾರು, ಪ್ರಾಂತ್ಯವಾರು, ಸಮುದಾಯವಾರು ಸಂವಾದಕ್ಕೆ ಮುಖಮಾಡುತ್ತವೆ. ಅದೇ ದಾರಿಯಲ್ಲಿ ಕನಕದಾಸರು ಹುಟ್ಟಿದ ಜಾತಿಯ ಪ್ರಶ್ನೆ ಏಳುತ್ತದೆ, ಅವರನ್ನ ಜಾತಿ ಹಿನ್ನೆಲೆಯಿಂದ ನೋಡಿ ಅವರ ಮಹೋನ್ನತಿಯನ್ನ

*Please cite this article as:* ಲೋಕೇಶ ಟಿ. (2024). ಜಾತಿ ವ್ಯವಸ್ಥೆಯ ಕುರಿತು ಕನಕದಾಸರ ಪ್ರತಿರೋಧದ ನೆಲೆಗಳು: ಒಂದು ವಿಶ್ಲೇಷಣೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(2). ಪು.ಸಂ.* 45–51

ಅಳೆಯುವಂತದ್ದಲ್ಲ. ಆದರೆ ಅಧ್ಯಯನ ಬಗೆಯಿಂದ ನೋಡಿದ ಸಂದರ್ಭಕ್ಕೆ ಕೆಲವು ವಿದ್ವಾಂಸರು ಕನಕರನ್ನು ಬೇಡರೆಂದು, ಕುರುಬರೆಂದು, ಪಾಂಚಾಳರೆಂಬ ವಾದಗಳಿವೆ. ಕನಕರು ಬೇಡರೆನ್ನುವ ವಿದ್ವಾಂಸರೆಂದರೆ, ಬೇಟಗೇರಿ ಕೃಷ್ಣಶರ್ಮ, ಹುಚ್ಚುರಾವ್ ಬೆಂಗೇರಿ, ಫ.ಗು.ಹಳಕಟ್ಟಿ, ಸಿಂಪಿಲಿಂಗಣ್ಣ, ಜಿ,ವರದರಾಜ್ ರಾವ್, ಎಮ್.ಎಮ್.ಕಲಬುರ್ಗಿ, ಬಿ.ರಾಜಶೇಖರಪ್ಪ, ದೇವೇಂದ್ರ ಮಾಧವನವರ್, ಜಿ.ಜಿ.ಮಂಜುನಾಥನ್, ಇ.ಪಿ.ರೈಸ್, ಕೆ.ಕಿಟಲ್, ಆರ್.ನರಸಿಂಹಾಚಾರ್ಯರು ಪ್ರಮುಖರು. ಮತ್ತೆ ಕೆಲವರು ಕನಕರನ್ನು ಕುರುಬರೆಂದು ವಾದ ಮಂಡಿಸುವವರೆಂದರೆ ಬೇಲೂರು ಕೇಶವದಾಸ್, ಬಿ.ಶಿವಮೂರ್ತಿ ಶಾಸ್ತ್ರಿ, ಜ್ಯೋತಿ ಹೊಸೂರು, ಎಸ್.ಕೆ.ರಾಮಚಂದ್ರರಾವ್, ಸುಧಾಕರ, ದೇಜಗೌ ಮುಂತಾದವರು. ಅದೇನೆ ಇರಲಿ ಕನಕದಾಸರ ಜೀವನಕ್ಕೆ ಸಂಬಂಧಿಸಿದಂತೆ ಹರಿದಾಸರ ಮನೆತನಗಳಲ್ಲಿ ಉಳಿಸಿಕೊಂಡು ಬಂದಿರುವ ದಾಖಲೆಗಳಂತೆ ಜನಜೀವನದಲ್ಲಿ ಕರ್ಣ ಪರಂಪರೆಯಾಗಿ ಬಂದಿರುವ ಐತಿಹ್ಯ ಹಾಗೂ ಡೊಳ್ಳಿನ ಹಾಡಿನಲ್ಲಿ ಸಿಗುವ ಮಾಹಿತಿಯ ಆಧಾರದ ಮೇಲೆ ತಂದೆ ಬೀರಪ್ಪ, ತಾಯಿ ಬಚ್ಚಮ್ಮ(ಭಕ್ತಮ್ಮ, ಭತ್ತಮ್ಮ) ಬಾಡ ಬಂಕಾಪುರದ ಸುತ್ತಲಿನ ಪ್ರದೇಶದ ನಾಡಗೌಡ ಅಥವಾ ಡಣ್ಣಾಯಕ ಪದದಿ ತಿರುಪತಿ ತಿಮ್ಮಪ್ಪನ ವರಪ್ರಸಾದದಿಂದ ಹುಟ್ಟಿದ ಮಗನಿಗೆ ತಿಮ್ಮಪ್ಪ ಎಂದು ಹೆಸರಿಟ್ಟರು, ಸಿಕ್ಕ ನಿಧಿಯಿಂದ ಕನಕಪ್ಪ ಆದ, ದಂಡನಾಯಕ ಪದವಿ ದೊರೆತಿದ್ದರಿಂದ ಕನಕನಾದ ದಾಸದೀಕ್ಷೆ ತೆಗೆದುಕೊಂಡ ಮೇಲೆ ಕನಕದಾಸನಾದ, ಹುಟ್ಟು ಹೆಸರು ಕನಕ ಇರಬೇಕು ಕಾರಣ ದಾಸರಾಗುವ ಮೊದಲು ಬರೆದವುಗಳಲ್ಲಿ ಕನಕ, ಕನಕಯ್ಯ, ಕನಕಪ್ಪ ಎಂಬ ಹೆಸರುಗಳೇ ಕಂಡುಬರುತ್ತವೆ. ಆದರೆ ಕನಕದಾಸರನ್ನು ಶೂದ್ರರಾಗಿ ಗುರುತಿಸಿದ್ದೆ ಹೆಚ್ಚು, ಮತ್ತೊಂದು ಗಮನಾರ್ಹ ಸಂಗತಿಯೆಂದರೆ ಅವರ ವಿದ್ಯಾರ್ಜನೆಯ ಕುರಿತ ಹಲವು ವಿದ್ವಾಂಸರಲ್ಲಿ ಗೊಂದಲ ಇರುವುದು, ಕನಕರ ಕೀರ್ತನೆಗಳು ಬೇರೆ ದಾಸರು ರಚಿಸಿದ ಸುಳಾದಿ, ಊಹಾಭೋಗ, ಗುಂಡಕ್ರಿಗಳನ್ನು ಒಳಗೊಳ್ಳದೆ ಸಮಾಜದ ಕುಂದುಕೊರತೆಗಳು ಕೀರ್ತನೆಯಲ್ಲಿ ವ್ಯಕ್ತವಾಗಿರುವುದು ನಿಜ ಸಂಗತಿ. ಇವರ ಹುಟ್ಟಿನ ಇಸ್ವಿಯ ಕಾಲಮಾನದಲ್ಲೂ ಕೂಡ ಸ್ಪಷ್ಟ ಚಿತ್ರಣ ಗೊಂದಲದಿಂದ ಕೂಡಿದೆ ,ಕಟ್ಟಿ ಶೇಷಾಚಾರ್ಯರ ಅಭಿಪ್ರಾಯದ ಪ್ರಕಾರ ಕ್ರಿ.ಶ.1405 ರಿಂದ 1606 ಎಂಬ ಕಾಲಸೂಚಕ ಅವಧಿ ಒಂದು ರೀತಿಯಲ್ಲಿ ಹತ್ತಿರಕ್ಕೆ ಬರುತ್ತವೆ, ಕಾರಣ ಬೇರೆ ಬೇರೆ ವಿದ್ವಾಂಸರೆಲ್ಲಾ ಹೇಳುವ ಕಾಲಮಾನಗಳು ಇವರು ಹೇಳುವ ಕಾಲಮಾನದ ಮಧ್ಯೆಯೇ ಬರುವುದು ಇದಕ್ಕೆ ಸಾಕ್ಷಿಯಾದಂತೆ ಚಿಕ್ಕಂದಿನಿಂದಲೇ ಬಂಕಾಪುರ ಶ್ರೀನಿವಾಸಾಚಾರ್ಯರ ಬಳಿಯಲ್ಲಿ ವಿದ್ಯಾಭ್ಯಾಸ, ತರ್ಕ, ವ್ಯಾಕರಣ, ಸಾಹಿತ್ಯ ಮೀಮಾಂಸೆಗಳಲ್ಲಿ ಸಿದ್ದಹಸ್ತನಾದ ಕನಕರು ಸಂಸ್ಕೃತದಲ್ಲೂ ಪಾರಂಗತನಾಗಿದ್ದ, ತಂದೆ ಕ್ಷತ್ರೀಯೋಚಿತ ವಿದ್ಯೆಯನ್ನು ಕಲಿಸಿದ.

ಬಾಡದ ಆದಿಕೇಶವನ ಭಕ್ತನಾಗಿ ಹಾಡುಗಳನ್ನೆಲ್ಲ ರಚಿಸುತ್ತಿದ್ದ ಜನರೆಲ್ಲರೂ ಇವನ ಬೆಳವಣಿಗೆಯನ್ನು ನೋಡಿ ಬೆರಗಾಗುತ್ತಿದ್ದರು. 11–12 ರ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡ ನಂತರ ಇವನ ದಾಯಾದಿಯು ನರಸಿಂಗನ ಬಳಿ ಚಾಡಿಹೇಳಿ ಕುತಂತ್ರ ಮಾಡಿ ನಾಡಗೌಡಿಕೆಯನ್ನು ತಾನು ಪಡೆದು ನಂತರ ಇವರನ್ನ ಒಕ್ಕಲೆಬ್ಬಿಸಿದ ಕನಕರು ತಾಯಿಯ ತವರೂರಾದ ಕಾಗಿನೆಲೆಗೆ ಬಂದು ನೆಂಟರ ಮನೆಯಲ್ಲಿ ನೆಲೆಸಿ ಮನೆಯಲ್ಲಿ ಕನಕರು ಕುರಿಗಳನ್ನ ಕಾಯುತ್ತಾ ಜೊತೆಗೆ ಊರ ಕೆಲಸಗಳಲ್ಲಿ ಭಾಗಿಯಾಗಿ ದುಡಿಯುತ್ತಾ ತಾನು ಕಟ್ಟಿದ ಹಾಡನ್ನು ಹಾಡುತ್ತಾ ಭಜನಾಮಂಡಳಿಯನ್ನು ಸ್ಥಾಪಿಸಿ ಸಮೂಹಗೀತೆ ಹಾಡುತ್ತಾ ಜೊತೆಗೆ

ಬಯಲಾಟ ರಚಿಸುವುದರ ಜೊತೆಗೆ ಅಭಿನಯವನ್ನೂ ಮಾಡುತ್ತಿದ್ದರು ಎಂಬ ಮಾತಿದೆ, ಈ ಜನಪ್ರಿಯತೆಯನ್ನು ಕಂಡು 1509 ರಲ್ಲಿ ಪಟ್ಟವನ್ನಲಂಕರಿಸಿದ್ದ ಕೃಷ್ಣದೇವರಾಯರು ಕನಕರನ್ನು ಬಂಕಾಪುರ ಪ್ರಾಂತ್ಯಕ್ಕೆ ದಂಡನಾಯಕರನ್ನಾಗಿ ನೇಮಿಸಿದರು, ಆದರೆ ಕೆಲವು ಸಮಯದ ನಂತರ ಅಚುತರಾಯರು ಕನಕರನ್ನು ದಂಡನಾಕ ಸ್ಥಾನದಿಂದ ಕೆಳಗಿಳಿಸಿದರು, ಅಂದಿನಿಂದ ಕನಕದಾಸರ ಬದುಕು ದುಗುಡಗಳಿಗೆ ಮುಖಮಾಡಿತು. ವಾಸ್ತವದ ನೈಜತೆ ಕಂಡ ಕನಕರು ಜೀವನ ವೈರಾಗ್ಯಗಳಿಗೆ ಸೆರೆಯಾಗಿದ್ದು ಇಲ್ಲಿಯೇ. ಹದಿನಾಲ್ಕನೆಯ ಶತಮಾನದ ಪೂರ್ವಾರ್ಧದ ಕಾಲ ಕರ್ನಾಟಕವು ಕೃಷ್ಣೆಯಿಂದ ಕನ್ಯಾಕುಮಾರಿವರೆಗೆ ಅಖಂಡ ಸಾಮ್ರಾಜ್ಯವನ್ನು ಕಟ್ಟಿ ಜಗತ್ತಿನ ಎಲ್ಲಾ ಜನರ ಗಮನ ಸೆಳೆದ ವಿಜಯನಗರ ಕನಕರನ್ನು ಸೆಳೆಯದೆ ಇರಲಿಲ್ಲ. ಕೃಷ್ಣದೇವರಾಯರ ಕುಹುಯೋಗವನ್ನ ನಿವಾರಿಸಿದ್ದ ಶ್ರೀವ್ಯಾಸರಾಯರು ವಿಜಯನಗರವನ್ನು ತನ್ನ ನೆಲೆಯಾಗಿ ಮಾಡಿಕೊಂಡರು. ನಂತರ ಇಲ್ಲಿ ಅನೇಕ ದಾಸಕೂಟಗಳು ಜನ್ಮತಳೆಯಲು ದಾರಿಯಾಯಿತು, ಪುರಂದರದಸರು, ಮತ್ತು ಕನಕದಾಸರು ಇವರ ಶಿಷ್ಯರಾದರು. ರಾಮಾನುಜರ ಸಿದ್ಧಾಂತ ಅನ್ವಯಿಗಳಾಗಿದ್ದ ತಿರುಮಲ ತಾತಚಾರ್ಯರು ಕೂಡ ಕನಕದಾಸರು ಗುರುವೆಂದೆ ಸ್ವೀಕರಿಸಿದರು, ಕನಕದಾಸರು ಶ್ರೀವ್ಯಾಸರಾಯರು, ಪುರಂದರದಾಸರು, ಶ್ರೀವಾದಿರಾಜರ ಸಮಕಾಲೀನರು ಎಂದು ದಾಖಲೆಗಳು ಹೇಳುತ್ತವೆ. ಕನಕದಾಸರು ಕೃಷ್ಣದೇವರಾಯ ಹಾಗೂ ಅಚುತದೇವರಾಯರ ಆಡಳಿತವಲ್ಲದೆ ರಾಮರಾಯರ ಮತ್ತು ವೀರಪ್ರತಾಪರ ರಾಜಕೀಯ ಸ್ಥಿತಿಯನ್ನು ಕಂಡವರಾಗಿದ್ದಾರೆ ಇವುಗಳ ಆಧಾರವೆಂಬಂತೆ ವಿಜಯನಗರದ ವ್ಯವಸ್ಥೆಗಳ ಅನುಭವಿಸಿ ಕೀರ್ತನೆಗಳಲ್ಲಿ ಅಭಿವ್ಯಕ್ತಿಸಿರುವುದೇ ಇದಕ್ಕೆ ಬಲವಾದ ಸಾಕ್ಷಿ. ಕನಕರು ಹೇಳುವ ಕಾಮನಹಬ್ಬದ ಚಿತ್ರಣವು ಇಟಲಿಯ ನಿಕೋಲಾ ಕೊಂತಿ (ಕ್ರಿ.ಶ.1420–21)ಯ ವಿವರಣೆ ಕನಕರ ವಾಸ್ತವಿಕ ಸಂಗತಿಗಳ ಉಲ್ಲೇಖಗಳನ್ನು ಪುಷ್ಟಿಕರಿಸುತ್ತವೆ, ಕನಕರ ವಾಸ್ತವದ ಸತ್ಯಗಳ ನಿಖರತೆಯನ್ನ ಮೂಡಿಸುತ್ತದೆ.

**ಕನಕದಾಸರು ಹಾಗೂ ವಿಜಯನಗರ ಸಮಾಜ**

ಕನಕದಾಸರು ವಿಜಯನಗರವೆಲ್ಲ ಸುತ್ತಾಡಿ ಅಂದಿನ ಸಮಕಾಲೀನ ವಾಸ್ತವಗಳನ್ನ ಪಟ್ಟಣ–ಬೀದಿಗಳ ನಗರ ವೈಭವ, ಪುರಗ್ರಾಮಗಳ ಚಿತ್ರಣವನ್ನು ಮನಮುಟ್ಟುವಂತೆ ತಮ್ಮ ಕೀರ್ತನೆಗಳಲ್ಲಿ ಚಿತ್ರಿಸಿದ್ದಾರೆ. ಅಂದಿನ ಎಲ್ಲಾ ವರ್ಗಗಳ ಜನರ ವಿಚಾರ ತೆರೆದಿಡುವುದಲ್ಲದೆ ಹರಿಯುವ ಹೊಳೆ ಅಗ್ರಹಾರಗಳು ಶೈವ–ವೈಷ್ಣವ ದೇವಾಲಯಗಳ ಪಾತ್ರ, ಇವನ್ನಾಶ್ರಹಿಸಿರುವ ಪುರೋಹಿತರು ರಾಜಪರಿವಾರ ಮುಂತಾದ ಸಂಗತಿಗಳ ಉಲ್ಲೇಖವಿದೆ, ಸಾಮಾನ್ಯ ಸಮಾಜದ ಜನವರ್ಗದ ಕುರಿತಾದ ಅಂಶಗಳ ವಿವರಣೆಯೂ ಇದೆ.

ವಿಶೇಷವಾಗಿ ಕನಕರು ಬೇಡರ ಪ್ರಸ್ತಾಪ ಮಾಡುತ್ತಾರೆ, ಮಧ್ಯರಾತ್ರಿಯ ಪಹರೆ(ಪಾರೆ) ಸಮುದಾಯ ಭೇರಿ(ಗಂಟೆ) ಹೊಡೆದರು ಆಗ ಮಿಕ್ಕ **ಬೇಡರು** ಒಗ್ಗಾಗಿ ದ್ವಾರಾವತಹಿಯನ್ನು ಸುತ್ತಿದರು, ಅಲ್ಲಲ್ಲಿ **ತಳವಾರರು** ಹೊಳೆವ ಕಠಾರಿಯ ಕೈಗೆತ್ತಿ ತೋಮರ ಬಿಲ್ಲು ಬಲುದಡಿ ಪಿಡಿಚಕ್ರಗಳೊಂದಿಗೆ ಊರನ್ನು ಕಾಯುತ್ತಿದ್ದರು, ಎಂಬ ಅಂದಿನ ಶ್ರೀಸಾಮಾನ್ಯರ ಗುರುತರ ವಿಚಾರಗಳಿವೆ. ಹಾಗೆ ಅಲ್ಲಲ್ಲಿ ಜೂಜಾಟ ಆಡುವ ಮಂದಿಯ ಬಗ್ಗೆ, ಯೋಗಶಾಲೆಗಳು, ಉಪ್ಪರಿಗೆಯ ಮಂದಿಯ ಮಾತು ಬರುತ್ತವೆ. ಮತ್ತಷ್ಟು ಬೇಡರ ವಿಚಾರವಾಗಿ ಅನಿರುದ್ದನ ಭೂಮಿಕೆ ನೆಲೆಗಟ್ಟಿನಲ್ಲಿ ಬೇಡರ ವೇಷಭೂಷಣಗಳು ವಿವಿಧ ಬಗೆಯ ಬಲೆಗಳು ಆಯುಧಗಳು ಒಂದೊಂದರ ಸೂಕ್ಷ್ಮ ವಿಚಾರ ಪರಿಯು ತುಂಬಾ ಹತ್ತಿರದಿಂದ ನೋಡಿದ

ದೃಶ್ಯಗಳ ದೆಸೆಯು ನಿರೂಪಣೆ ಕಂಡಿದೆ, ನಂತರ ವರ್ಣವ್ಯವಸ್ಥೆಯ ಲೋಪದೋಷಗಳು ಓರೆ–ಕೋರೆಗಳನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿದರು. ಮಾನವ ಸಮಾಜದ ನಿದರ್ಶನಗಳನ್ನು ಎತ್ತಿಹಿಡಿಯುವುದಲ್ಲದೆ ಮನಮುಟ್ಟುವಂತೆ ಹೇಳುವ ದಿಟ್ಟತನ ಕನಕರದ್ದು. ಹಾಗೆ ಅಂದಿನ ಸಮಾಜದ ವಿಚಾರಗಳ ಒಳಭೇಗುದಿಗಳನ್ನು ವ್ಯಕ್ತಪಡಿಸುವುದು ಈ ದಿಸೆಯ ಒಳಗೆ ಕುಲ ಕುಲ ಕುಲವೆನ್ನುತಿಹರು ಕುಲವಾವುದು ಸತ್ಯ ಸುಖವುಳ್ಳ ಜನರಿಗೆ, ಮಡಿ ಮಡಿಯೆಂದು ಅಡಿಗಡಿಗರ ಹಾರುತಿ ಮಾನಭಂಗವ ಮಾಡಿ ಮಲವ ತೊಳೆಯಬಲ್ಲರಲ್ಲದೇ ಮನವಾ ತೊಳೆಯಬಲ್ಲರೇ ಕೀರ್ತನೆಗಳು ಡಂಭಾಚಾರವನ್ನು ಖಂಡಿಸಿದರು.

***ಕೆಸರೊಳು ತಾವರೆ ಪುಟ್ಟಲು ಆದ ತಂದು***

***ಕುಸುಮನಾಭನಿಗೆ ಅರ್ಪಿಸಲಿಲ್ಲವೇ***

***ಹಸುವಿನ ಮಾಂಸದೊಳುತ್ಪತ್ತಿ ಕ್ಷೀರವ***

***ವಸುಧೆಯಳು ಭೂಸುರರು ಉಣಲಿಲ್ಲವೇ***

ವರ್ಣ ವ್ಯವಸ್ಥೆಯ ಲೋಪದೋಷಗಳನ್ನ ಅವ್ಯವಸ್ಥೆಗಳ ನಿರ್ದಾಕ್ಷಿಣ್ಯವಾಗಿ ಖಂಡಿಸಿದರು ಮಾನವ ಸಮಾಜದ ನಿದರ್ಶನಗಳನ್ನ ಎತ್ತಿ ಹಿಡಿದು ಕನಕರು ಜನಮುಖಿಯಾದವರು ಸಾಮಾಜಿಕ ಜಾಗೃತಿ ಮೂಡಿಸಿ ವ್ಯಕ್ತಿಗತ ಸಮಕಾಲೀನ ನೈಜ ಬದುಕು ದಾಖಲಿಸಿ ಪ್ರಸ್ತುತಪಡಿಸಿದರು.

**ಕನಕರು ಮತ್ತು ಕಾವ್ಯಗಳು**

ಕನಕರು ವಿದ್ವಾಂಸರೆನ್ನುವ ವರ್ಗವೊಂದಾದರೆ ಅವರು ಓದಲು ಬರೆಯಲು ಬಾರದ ದಾಸ ಕೀರ್ತನಕಾರರು ಎಂಬ ವಾದಗಳಿವೆ ಇನ್ನೊಂದೆಡೆ ಕನಕದಾಸರ– ನಳಚರಿತ್ರೆ, ಹರಿಭಕ್ತಸಾರ, ಮೋಹನತರಂಗಿಣಿ ಪ್ರಮುಖ ಕಾವ್ಯವಾಗಿ ಗುರುತಿಸಲ್ಪಟ್ಟಿವೆ.

'ಮೋಹನ ತರಂಗಿಣಿ'ಯು ಅಂದಿನ ಜನಜೀವನದ ಆಚಾರ–ವಿಚಾರಗಳ ನಿಷ್ಪ್ರಯೋಜಕತೆ ಪರಿಭಾವಿಸಿ ಚಿತ್ರಿಸಿರುವುದು ಗಮನಾರ್ಹ, ಭಕ್ತಿಯ ಕುರಿತು ಎಳ್ಳುಕಾಳಿನಷ್ಟು ಭಕ್ತಿ ಎನ್ನೊಳಗಿಲ್ಲ, ಕಳ್ಳರಿಗೆ ಕಳ್ಳರಂತೆ ಬೆಳ್ಳಕ್ಕಿಯಂದದಲಿ ಢಂಬ ಎಂಬ ಕೀರ್ತನೆ–ಭಕ್ತಿ ಇಲ್ಲದೆ ಗುಡಿಯ ಸುತ್ತುಹಾಕುವ ಪ್ರದರ್ಶನಪ್ರಿಯ ಭಕ್ತರನ್ನು ಗಾಣದೆತ್ತಿನ ರೂಪದಲ್ಲೂ ಜಪಮಣಿಯ ಸರವನ್ನ ಹಿಡಿದು ಜಪಮಾಡುವ ಯಾಂತ್ರಿಕತೆಯನ್ನು, ಮಾಣಿಕ್ಯ ಪರೀಕ್ಷೆಗೆ ಕುರಿತ ಕುರುಡರು ಮುತ್ತನ್ನು ಕೈಯಲ್ಲಿ ಹಿಡಿದು ಬಿಡುವ ರೂಪಕದಲ್ಲೂ ಅಭಿವ್ಯಕ್ತಿಗಳ ಸಂಗತಿಗಳು ಸಮಾಜದ ದೊಂಬರಾಟವ ಪ್ರದರ್ಶನವನ್ನ ಟೀಕಿಸುವ ಚಿತ್ರಣಗಳು ಕನಕರ ಕೀರ್ತನೆಗಳಲ್ಲಿವೆ. ಹಾಗೆ ನೇಮವಿಲ್ಲದೆ ಹೋಮವೇತಕೆ ಜಪವ ಮಾಡಿದರೇನು; ತಪವ ಮಾಡಿದರೇನು ವಿಪರೀತ ಕಪಟಗುಣ ಕಲುಷಿತವಿದ್ದರು ಮನಶುದ್ದಿ ಇಲ್ಲದವರಲ್ಲಿ ಎಂಬ ಮಾತು ಕಪಟಿಗಳನ್ನು ಕುಟುಕಿದಂತೆ ಭಾಸವಾಗುತ್ತದೆ. ವಿಶೇಷವಾಗಿ ಮೋಹನತರಂಗಿಣಿಯ ಕೆಲವು ಭಾಗಗಳಲ್ಲಿ ಕೃಷ್ಣನನ್ನು ಕೃಷ್ಣದೇವರಾಯನಿಗೆ ಸಮೀಕರಿಸಿ ಅಂದಿನ ಸಾಮಾಜಿಕ ನೆಲೆಗಳನ್ನು ತೆರೆದಿಡುತ್ತಾರೆ.

**ರಾಮಾಧಾನ್ಯಚರಿತೆ**

ಕನ್ನಡದಲ್ಲಿ ವಸ್ತುವಿನ ವಿಚಾರಕ್ಕೆ ಗಮನಾರ್ಹವಾದ ಕೃತಿ ಇದು ನೂರಐವತ್ತೆಂಟು ಷಟ್ಪದಿಗಳಲ್ಲಿ ರಾಮಾಯಣವನ್ನು ಸೇರಿಸಲಾಗಿದೆ, ಮುಖ್ಯವಾಗಿ ರಾಗಿ ಭತ್ತಗಳ ಕಥೆಯನ್ನು ಕನಕದಾಸರು ಸ್ವಾರಸ್ಯಕರವಾಗಿ ನಿರೂಪಿಸಿದ್ದಾರೆ. ಇದು ದೇವರು–ಬಡವರಪರ ಎಂಬ ನಿಲುವನ್ನು ತೋರುತ್ತದೆ ಆದರೆ ಇದೊಂದು ವಿಡಂಭನ ಪ್ರತೀಕಗಳು ಉಳ್ಳವರ ಬಡವರ ಅರ್ಥಾತ್ ಸ್ಪೃಶ್ಯ–ಅಸ್ಪೃಶ್ಯ, ಒಡೆಯ ಆಳು ಎಂಬ ವರ್ಗಸಂಘರ್ಷಗಳ ನಡುವಿನ ರೂಪಕಗಳನ್ನ ತೋರುತ್ತದೆ. ಕನಕರು ಬದುಕಿನಲ್ಲಿ ಎದುರಿಸಿದ ಜಾತೀಯತೆಯ ಕಹಿಘಟನೆಗಳು ರಾಮಧಾನ್ಯಚರಿತೆಯಲ್ಲಿ ಪ್ರತಿಫಲನಗೊಂಡಂತೆ ಭಾಸವಾಗುವುದು ಕಾಣುತ್ತದೆ, ಮೇಲಾಗಿ ರಾಗಿ ಮತ್ತು ಭತ್ತದ ಮೇಲು–ಕೀಳುಗಳು ಪರೀಕ್ಷೆ ನಡೆದು ನವಧಾನ್ಯದಲ್ಲಿ ರಾಗಿಯೇ ಬಲಿಷ್ಟ ಎಂಬ ಸಂದೇಶ ತಿಳಿದು ರಾಗಿಯನ್ನು ಉಪೇಕ್ಷಿಸಬಾರದು ಎಂಬ ವಿಚಾರದ ತತ್ವವು ಕಾಣುತ್ತದೆ.

**ನಳಚರಿತ್ರೆ**

ನಳಚರಿತ್ರೆ ನಿಜವಾಗಿ ಅದು ಧಮಯಂತಿ ಚರಿತ್ರೆ ಎನ್ನಲು ಅಡ್ಡಿಇಲ್ಲ ಎನ್ನುತ್ತಾರೆ ಪ್ರೊ.ಎ.ವಿ.ನಾವಡ[7] ಅದು ಸತ್ಯ ಸಂಗತಿಯು ಹೌದು ಭಾರತೀಯ ಹಲವು ಕಾವ್ಯಪುರಾಣಗಳಲ್ಲಿ ಪುರುಷ ಪ್ರಧಾನತೆಗೆ ಒತ್ತು ನೀಡುವುದರಿಂದ ಕನಕದಾಸರು ಇದರಿಂದ ಹೊರತಲ್ಲ ಎಂಬುದು ಚಿಂತನ ಪರವಾದ ಅಂಶ, ಅದು ಕನಕರ ನಿರೂಪಣೆಯಲ್ಲಿ ತೋರುತ್ತದೆ.

**ಕನಕರ ಸ್ತ್ರೀ ಸಂಗತಿಗಳು**

ಕನಕರು ಅಂದಿನ ಸ್ತ್ರೀ ವಿಚಾರವ ಕಂಡಂತೆ ಸಂಗತಿಗಳನ್ನ ಕಣ್ಣಿಗೆ ಕಟ್ಟಿದಂತೆ ಹೇಳುತ್ತಾರೆ ಕೃಷ್ಣದೇವರಾಯನ ಅರಮನೆಯ ವೈಭವವನ್ನು  ಅನೇಕ ಕೀರ್ತನೆಗಳಲ್ಲಿ ಹರವಿದ್ದಾರೆ, ಅಲ್ಲಿ ಕಟ್ಟಿಗೆಗಾರ್ತಿಯರು, ತೊಂಡೆವಾಯ, ಪಾರಕಿಯರು, ಸಂಬಳಿಗೆಗಾತಿಯರು, ಮೊಗವಾವುಡದವರು, ಹಾವುಗೆಯವಳು, ಸಂಗೀತಗಾರ್ತಿಯರು, ನಿಯೋಗದವರು ಅಂತಪುರದಲ್ಲಿ ಕಾರ್ಯನಿರ್ವಹಿಸುತ್ತಿದ್ದವರ ಸಂಗತಿ ಹೇಳಿದ್ದಾರೆ. ಅಲ್ಲದೆ ಅನಿರುದ್ದನ ನಗರ ಶೋಧನೆಯ ಪ್ರಸಂಗ ಮುಕ್ತ  ಹೆಣ್ಣಿನ ಬಜಾರ (ಸೂಳಗೆರೆ)ಯಲ್ಲಿ ಹಸ್ತಿ, ಅವುಜ, ವೀಣೆ . ಮದ್ದಳ ರಾವಣಹಸ್ತ, ಕಿನ್ನರಿ, ಜಂತ್ರ, ಉಡುಕು, ಸ್ವರಮಂಡಲ ಮುಂತಾದ ಸಂಗೀತ ಸಾಧನ ಪರಿಣಿತ ಸ್ತ್ರೀಯರು ಬೀದಿಯ ಇಕ್ಕೆಲಗಳಲ್ಲಿ ವಾಸಿಸುತ್ತಿದ್ದರು, ಎಂಬುದಾಗಿ ಅದು ದ್ವಾರಿಕೆಯ ಸೂಳೆಗೇರಿಯಾಗಿ ಪ್ರತಿಪರಿಯಾಗಿ ಭಾವಿಸದೇ ಬಿಡುವುದಿಲ್ಲ.

ಕನಕರು ಸಮಾಜ ಸ್ತ್ರೀ ಪ್ರಭುತ್ವ ಅಲ್ಲದೆ ನಗರ ಜೀವನದ ರೂಪುರೇಷೆ ಭೌಗೋಳಿಕ ಪರಿಚಯವು ಮುನ್ನೆಲೆಗೆ ಬರುತ್ತವೆ, ಕೆರೆಬಾವಿಗಳು, ಅಗ್ಗಡದ ಎಡೆಗಳು, ಧರ್ಮಿಷ್ಟರು ಕಂಬಿಯೊಳ್(ಕಾವಡಿಗಳಲ್ಲಿ) ತೊರೆನೀರ ತರಿಸಿ ನಿರ್ಮಿಸಿದ ಅರವಟ್ಟಿಗೆಗಳು ರಸ್ತೆಯ ಇಕ್ಕೆಲಗಳೆಡೆ ನೆರಳ ಕೊಡುವ ಮರಗಳು ಇಲ್ಲವೆ ನರಾಶ್ರಯ ಮಠ ಡೇರೆಯ ಗುಡಾರಗಳು ಇದ್ದವು. ಭುಕ್ತಶಾಲೆ(ಊಟದಮನೆ) ಕಂಪೆರವ ಘಟಪೂರಿತ ಗಂಧಶೋಧಕ ಅರವಟ್ಟಿಗೆಯ ಮನೆಗಳು  ದಾರಿಯ ಉಭಯ ತಟದ ಸಾಲುಮರಗಳು ದಾರಿಕಾರರನ್ನು ಕರೆಕರೆದು ಬೆಲ್ಲದ ಪಾನಕವೆರೆದು ಅಲ್ಲದೆ ಕೆನೆಮೊಸರಶದವ(ಬುತ್ತಿಯ) ಎಲ್ಲರಿಗೂ ಉಣಬಡಿಸುವರು ಎಂದಿದ್ದಾರೆ. ಮುಂದುವರೆದು ಮುಂಬರುತ್ತ ಅಲ್ಲಿನ ಮಠಗಳಲ್ಲಿ ಸಾವಿರ ಸಾವಿರ ಲಕ್ಷ ಸನ್ಯಾಸಿಗಳು

ಉಂಡುತಣಿಯುತ್ತಿದ್ದರು ಎಂದು ಹೇಳುತ್ತಾರೆ, ಇವರೆಲ್ಲಾ ಬೇರೆ ಬೇರೆ ಕಡೆಯಿಂದ ಬಂದವರು ಎಂಬುದು ಹೇಳಲು ಮರೆಯುದ್ದಿಲ್ಲ. ಅರಮನೆಯ ಪರಿಚಯಾತ್ಮಕ ವಿವರಣೆ ಇದೆ.

ಕೊನೆಯದಾಗಿ ಕನಕರ ಜೀವನ ವಿಚಾರಗಳು ಸಂವಾದಕ್ಕೆ ಬಂದಾಗ ಅವರು ವ್ಯಕ್ತಿತ್ವ ಎಲ್ಲವನ್ನ ಮೀರಿ ಬೆಳೆದವರು ಎನಿಸದೆ ಇರದು, ಶ್ರೇಣಿಕೃತ ಸಮಾಜದ ಅನಿಷ್ಟಗಳನ್ನ ನಿರ್ಭೀತಿಯಿಂದ ರಾಜನೆನ್ನದೆ ಪಂಡಿತರೆನ್ನದೆ ಅನಾಚಾರಿಗಳ ದಾರಿಯನ್ನ ದಯೆ–ದಾಕ್ಷೀಣ್ಯವಿಲ್ಲದೆ ಎಲ್ಲಾ ಲೋಳಲೊಟ್ಟಿಗೆಗಳ ಕಂದಾಚಾರಗಳನ್ನು ಕೂಡ ಅಂಜದೆ ಅಳುಕದೆ ಹೇಳದೆ ಮರೆಯುದಿಲ್ಲ. ಕನಕರ ಪಾಂಡಿತ್ಯಪೂರ್ಣ ಕೊಡುಗೆಗಳನ್ನು ಇತರರು ಅರಗಿಸಿಕೊಳ್ಳಲಿಲ್ಲ, ಅವರು ಮಾಡಿದ ಸಮಾಜ ಸೇವೆ ಲೋಪವಿಲ್ಲದ ಭಕ್ತಿಯ ಪ್ರತಿರೋಧ ಎಂತವರ ಅರಿವಿಗೆ ಬರದೆ ಇರಲಾರದು. ಪ್ರತಿ ಮನುಷ್ಯನ ಆತ್ಮ ವಿಮರ್ಶೆ ತನ್ನ ಹಾಗೂ ತನ್ನ ಸುತ್ತಮುತ್ತಲಿನ ಪರಿಸರ ತಿಳಿಯುವ ಪರಿಹಾರ  ಇವರ ಸ್ಪಷ್ಟ ಕೀರ್ತನೆಗಳಿಂದಲೆ ಮೂಡಿಬಂದಿರುವುದಂತು ಸೂಕ್ತವೆ ಹೌದು.

**ಆಕರ ಗ್ರಂಥಗಳು**


- ಬೆಟಗೇರಿ ಕೃಷ್ಣಶರ್ಮ, ಕರ್ನಾಟಕ ಜನಜೀವನ, ಶ್ರೀಗಾಯಿತ್ರಿ ಪ್ರಿಂಟಿಂಗ್ ವರ್ಕ್ ಬೆಂಗಳೂರು.
- ಗೀತಾಚಾರ್ಯ ನಾ. (2008). ಹರಿದಾಸ ಸಾಹಿತ್ಯದಲ್ಲಿ, ವಿಶಿಷ್ಟದ್ವೈತ, ಪ್ರಸಾರಾಂಗ ಕನ್ನಡ ವಿಶ್ವವಿಧ್ಯಾಲಯ, ಹಂಪಿ.
- ನಾವಡ ಎ. ವಿ. (2015). *ಸಾಹಿತ್ಯ ಶೋಧ.* ಶೋಧನ ಪ್ರಕಾಶನ, ಮಂಗಳೂರು.
- ಸಬೀಹಾ ಭೂಮಿಗೌಡ. (2002). *ಮಧ್ಯಕಾಲೀನ ಕನ್ನಡ ಸಾಹಿತ್ಯ ಕರ್ನಾಟಕ ಸಂಗಾತಿ.* ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
- ಸುಧಾಕರ. (ಸಂ). (2003). *ಕನಕದಾಸರ ಕೀರ್ತನೆಗಳು, ಭಾಗ–1 ಸಮಗ್ರ ದಾಸಸಾಹಿತ್ಯ, ಸಂಪುಟ–5,* ಕರ್ನಾಟಕ ಸರ್ಕಾರ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.


**ಪರಾಮರ್ಶನ ಗ್ರಂಥಗಳು**


- ಚಂದ್ರೇಗೌಡ, ಎನ್. ಆರ್. (2012). *ವಿಜಯನಗರ ಅರಸರ ಕಾಲದ ಸಾಹಿತ್ಯ.* ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮಾನಸ ಗಂಗೋತ್ರಿ ಮೈಸೂರು.
- ಪಂಚಮುಖಿ, ಸಾ.ಸ್ವಾ. (2006). *ದಾಸ ಸಾಹಿತ್ಯವೊ–ವಚನ ಸಾಹಿತ್ಯವೊ ವಿದ್ಯಾರತ್ನ (ಸುವರ್ಣ ಕರ್ನಾಟಕ ಕರ್ನಾಟಕ ಸು. ಮಹೋತ್ಸವ ಸ್ಮರಣ ಸಂಪುಟ).* ಕರ್ನಾಟಕ ಹಿಸ್ಟರಿಕಲ್ ರಿಸರ್ಚ್ ಸೊಸೈಟಿ, ಧಾರವಾಡ.

- ಸಂಪತ್ತುಮಾರಾಚಾರ್ಯ, ಎ. ಎಸ್. (1997). *ಕರ್ನಾಟಕ ಸಂಗೀತಕ್ಕೆ ವಿಜಯನಗರ ಕಾಲದ ಕೆಲವು ಹರಿದಾಸರ ಕೊಡುಗೆ, (ವಿಜಯನಗರ ಅಧ್ಯಯನ ಸಂಪುಟ–2).* ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.
- ಶ್ರೀಧರ ಪಿಸ್ಸೆ. (2006). ಮಧ್ಯಕಾಲೀನ ಕನ್ನಡ ಸಾಹಿತ್ಯದ ಸಾಂಸ್ಕೃತಿಕ ಪರಿಸರ. ಪ್ರಸರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.